ಹೋದ ಸಂದರ್ಭದಲ್ಲಿ ಜೆಸ್ಸಿ ಓವೆನ್ಸ್‌ಗೆ 9ರ ಹರೆಯ.

ಶಾಲಾ ಕಾಲೇಜು ಸ್ಪರ್ಧೆಗಳಲ್ಲಿ ಮಿಂಚಿದ ಜೆಸ್ಸಿ ಓಹಿಯೋ ವಿಶ್ವವಿದ್ಯಾಲಯಕ್ಕೆ ಸೇರಿದರು. ಅಲ್ಲಿ ಲಾರ್‍ರಿ ಸ್ಯಾಂಡೇರ್ ಎಂಬ ತರಬೇತಿದಾರನ ಕಣ್ಣಿಗೆ ಬಿದ್ದಿದ್ದೇ ಆತನ ಬೆಳವಣಿಗೆಗೆ ಇನ್ನೊಂದು ಬಹುಮುಖ್ಯ ತಿರುವು ಸಿಕ್ಕಿತು. ಇಲ್ಲಿಂದ ಮುಂದಿನ ಮೂರು ವರ್ಷಗಳೇ ಜೆಸ್ಸಿ ಓವೆನ್ಸ್ ಕ್ರೀಡಾ ಜೀವನದ ಮಹತ್ವದ ಕಾಲಾವಧಿ.

ಈ ಮೂರು ವರ್ಷಗಳ ಕಾಲ ಜೆಸ್ಸಿ ಜೀವನದಲ್ಲಿ ಸಂಭವಿಸಿದ ಎಲ್ಲಾ ಘಟನೆಗಳ ಚಿತ್ರಣವೇ 'ರೇಸ್' ಚಿತ್ರದ ಕಥಾವಸ್ತು. ಜೋಶೇರ್ಸ್ ನೀಲ್ ಮತ್ತು ವಾಟರ್ ಹೌಸ್ ರಚಿಸಿರುವ ಚಿತ್ರಕತೆಯನ್ನು ನಿರ್ದೇಶಿಸಿದವರು ಸ್ಟೀಫನ್ ಹಾಕಿನ್ಸ್.

ಅಮೆರಿಕ ಹಾಗೂ ಜರ್ಮನಿ ಎರಡೂ ದೇಶಗಳಲ್ಲಿ ವರ್ಣಭೇದದ ಬೆಂಕಿ ಉರಿಯುತ್ತಿರುವಾಗಲೇ 'ಬರ್ಲಿನ್' ಒಲಿಂಪಿಕ್ಸ್‌ಗೆ ಸಿದ್ಧತೆಗಳು ಶುರುವಾಗಿದ್ದವು. ಓಹಿಯೋ ವಿಶ್ವವಿದ್ಯಾಲಯಕ್ಕೆ ಓದಿನೊಂದಿಗೆ ಓಟಕ್ಕೂ ಶುರುವಿಟ್ಟುಕೊಂಡ ಓವೆನ್ಸ್ ತರಬೇತುದಾರ ಸ್ಯಾಂಡೇರ್ ಹಿಡಿತಕ್ಕೆ ಸಿಕ್ಕ ಮೇಲಂತೂ ಸ್ಪರ್ಧೆಯ ಚಟುವಟಿಕೆಗಳಿಗೆ ಸಿಕ್ಕಿದ್ದು ದೊಡ್ಡ ಚಾಲನೆ.

ಸ್ವಂತ ದೇಶವಾದ ಅಮೆರಿಕ–ಒಲಿಂಪಿಕ್ಸ್ ನಡೆಯಲಿರುವ ಜರ್ಮನಿ ಎರಡೂ ಕಡೆ ಇದ್ದ ನಾಲ್ಕಾರು ರೀತಿಯ ಅಡೆತಡೆಗಳನ್ನು ಎದುರಿಸಬೇಕಾದ ಅನಿವಾರ್ಯತೆ ಜೆಸ್ಸಿಯದು. ಸ್ವಂತ ಪರಿಶ್ರಮ ಮತ್ತು ಕಠಿಣ ಅಭ್ಯಾಸದಿಂದ ಸ್ಪರ್ಧೆಗೆ ಸಜ್ಜಾಗಿದ್ದ ಜೆಸ್ಸಿ ಓವೆನ್ಸ್‌ಗೆ ದೃಢವಾದ ಆತ್ಮವಿಶ್ವಾಸ ತುಂಬಿದ್ದು ತರಬೇತಿದಾರ ಲಾರ್‍ರಿ ಸ್ಯಾಂಡರ್ಸ್.

ಆ ಕಾಲದಲ್ಲಿ ಬಿಳಿಯ ಅಮೆರಿಕನ್ನರೊಂದಿಗೆ ಓಡಲು ಕರಿಯರಿಗೆ ಅನುಮತಿ ಇನ್ನೂ ಸಿಕ್ಕಿರಲಿಲ್ಲ. ಮೊದಲಿಗೆ ಬಿಳಿಯರೊಂದಿಗೆ ಓಡಲು ಓವೆನ್ಸ್ ಸ್ಯಾಂಡರ್ಸ್ ಅವಕಾಶ ಒದಗಿಸಿಕೊಟ್ಟರು.

ಹೀಗೆ ಒಂದೊಂದು ಹಂತವನ್ನೂ ಬಿಡಿಸಿಡುತ್ತ ಹೋಗುವ 'ರೇಸ್' ಅಭ್ಯಾಸ ಸಮಯದಲ್ಲೂ

ಕಪ್ಪು ವರ್ಣೀಯ ಓಟಗಾರನ ಕಥನ 'ರೇಸ್'ನ ದೃಶ್ಯ

